ಆ) ಇದಕ್ಕಾಗಿ ಎಷ್ಟು ಹಣ ವೆಚ್ಚ ಮಾಡಲು ಅಂದಾಜು ಮಾಡಲಾಗಿದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಈವರೆವಿಗೆ ಉದ್ದೇಶಿಸಿರುವ ೧೫ ಉಪ ಯೋಜನೆಗಳ ಪೈಕಿ ೧೩ ಉಪ ಯೋಜನೆಗಳ ಬಿಡುಗಡೆಯನ್ನು ಕೇಂದ್ರ ಸರ್ಕಾರದ ಜಲಸಂಪನ್ಮೂಲ ಸಚಿವಾಲಯದ ಸಲಹಾ ಸಮಿತಿಯಿಂದ ಬಿಡುಗಡೆ ಪಡೆಯಲಾಗಿದೆ. ಬಿಡುಗಡೆಯಾದ ವಿವಿಧ ಉಪ ಯೋಜನೆಗಳಿಗೆ ರಾಜ್ಯ ಸರ್ಕಾರವೇ ಮಂಜೂರಾತಿ ನೀಡುವುದು.

ಆ) ವಿಶ್ವಬ್ಯಾಂಕ್ ನೆರವಿನಿಂದ ಕೈಗೊಳ್ಳಲಾದ ರಾಷ್ಟ್ರೀಯ ಜಲ ನಿರ್ವಹಣಾ ಯೋಜನಾ ಒಟ್ಟಾರೆ ಅಂದಾಜು ಮೌಲ್ಯ ೪೫೬.೬೪ ಕೋಟಿ ರೂ.ಗಳು.

ರಾಜ್ಯದಲ್ಲಿ ವಿಶ್ವಬ್ಯಾಂಕಿನ ನೆರವಿನಿಂದ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ

೧೦೨. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಲೋಕೋಪಯೋಗಿ, ನೀರಾವರಿ ಮತ್ತು ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಿಶ್ವಬ್ಯಾಂಕ್ ನೆರವಿನ ಎಷ್ಟು ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ ?

ಆ) ಅವುಗಳಲ್ಲಿ ಎಷ್ಟು ಪೂರ್ಣಗೊಂಡಿವೆ ?

ಇ) ಅವುಗಳಿಂದ ಎಷ್ಟು ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯಾಗುತ್ತಿದೆ ಮತ್ತು ಒಂದು ಹೆಕ್ಟೇರ್ ನೀರಾವರಿಗೆ ತಗಲುವ ವೆಚ್ಚವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ವಿಶ್ವಬ್ಯಾಂಕ್ ನೆರವಿನೊಡನೆ ೭೮ ಸಣ್ಣ ನೀರಾವರಿ ಕೆರೆ ಯೋಜನೆಗಳನ್ನು ಕೈಗೊಳ್ಳಲಾಯಿತು.

ಆ) ಅವುಗಳಲ್ಲಿ ೬೫ ಸಣ್ಣ ನೀರಾವರಿ ಕೆರೆ ಯೋಜನೆಗಳು ಇದುವರೆಗೆ ಪೂರ್ಣಗೊಂಡಿವೆ.

ಇ) ಈ ೭೮ ಸಣ್ಣ ನೀರಾವರಿ ಕೆರೆ ಯೋಜನೆಗಳಿಂದ ನೀರಾವರಿ ಆಗುವ ಒಟ್ಟು ಪ್ರದೇಶ ೨೪೦೫ ಹೆಕ್ಟೇರುಗಳು ಮತ್ತು ನೀರಾವರಿಯಾಗುವ ಒಂದು ಹೆಕ್ಟೇರಿಗೆ ತಗಲುವ ವೆಚ್ಚ ೪೬.೨೭೧ ರೂ.ಗಳು.

ಕೃಷ್ಣಾ ನದಿಯ ಹೆಚ್ಚುವರಿ ನೀರಿನ ಬಗ್ಗೆ ಬಚಾವತ್ ಆಯೋಗದ ತೀರ್ಮಾನ ಕಾರ್ಯಗತ ಮಾಡುವ ಬಗ್ಗೆ

೧೦೧. ಶ್ರೀಜಿ. ರಾಜೂಗೌಡ (ಹನೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾನದಿಯಲ್ಲಿ ಹೆಚ್ಚುವರಿ ನೀರು ಎಷ್ಟಿದೆ ಎಂದು ಅಂದಾಜು ಮಾಡಲಾಗಿದೆಯೇ ?

ಆ) ಹೆಚ್ಚುವರಿ ನೀರಿನ ಬಗ್ಗೆ ಬಚಾವತ್ ಆಯೋಗದ ತೀರ್ಮಾನವೇನು ?

ಇ) ಇದನ್ನು ಕಾರ್ಯಗತ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಹೌದು.

ಆ) ಬಚಾವತ್ ಆಯೋಗದ ತೀರ್ಮಾನದಂತೆ ಇರುವ ಒಟ್ಟು ಹೆಚ್ಚುವರಿ ನೀರಿನ ಸುಮಾರು ೩೫೩ ಟಿಎಂಸಿ. ಇದರಲ್ಲಿ ಕರ್ನಾಟಕದ ಪಾಲು ೧೭೭ ಟಿಎಂಸಿ.

ಇ) ಕರ್ನಾಟಕದ ಹೆಚ್ಚುವರಿ ನೀರಿನ ಬಳಕೆಯು ಸ್ಕೀಮ್ ಬಿ'ನಲ್ಲಿ ಬರುತ್ತದೆ. ಸ್ಕೀಮ್ 'ಬಿ' ಜಾರಿಗೆ ಬರಲು ಕೃಷ್ಣಾಕೊಳ್ಳ ಪ್ರಾಧಿಕಾರ ರಚನೆಯಾಗಬೇಕು.